ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ಶ್ರೀ ಹೆಚ್.ಕೆ.ಆರ್ ವಕೀಲರಿಂದಃ

ಅಪಘಾತವನ್ನು ನಾನು ಕಣ್ಣಾರೆ ನೋಡಿರುತ್ತೇನೆ. ಅಪಘಾತವಾದ ಬಗ್ಗೆ ಪೊಲೀಸರಿಗೆ ನಾನು ದೂರು ಕೊಟ್ಟಿರುವುದಿಲ್ಲ. ಅಪಘಾತದಲ್ಲಿ ಭಾಗಿಯಾಗಿ ಕಾರಿನ ನೋಂದಣಿ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಅಪಘಾತವಾದ ದಿನ ಮೃತ ನನ್ನ ತಮ್ಮ ಚಾಲನೆ ಮಾಡುತ್ತಿದ್ದ ದ್ವಿ ಚಕ್ರ ವಾಹನದ ನೋಂದಣಿ ಸಂಖ್ಯೆ ಈಗ ನನಗೆ ನೆನಪಿರುವುದಿಲ್ಲ. ಅಪಘಾತಪಡಿಸಿದ ಕಾರನ್ನು ನಾನು ನೋಡಿರುವುದಿಲ್ಲ. ಅಪಘಾತವಾದ ನಂತರವೂ ಸಹ ಸದರಿ ಕಾರನ್ನು ನೋಡಿರುವುದಿಲ್ಲ. ಮೃತ ನನ್ನ ತಮ್ಮನಿಗೆ ವಾಹನ ಚಾಲನಾ ಪರವಾನಗಿ ಇತ್ತು. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅಪಘಾತವಾದ ದಿನ ಚಲಾಯಿಸುತ್ತಿದ್ದ ದ್ವಿ ಚಕ್ರ ವಾಹನ ನನ್ನ ತಮ್ಮನದಾಗಿತ್ತು. ನನ್ನ ತಮ್ಮ ಚಲಾಯಿಸುತ್ತಿದ್ದ ವಾಹನಕ್ಕೆ ಯಾವ ಕಂಪನಿಯ ವಿಮಾ ಪಾಲಿಸಿ ಇತ್ತು ಎಂದು ನನಗೆ ಗೊತ್ತಿಲ್ಲ. ಅಪಘಾತವಾದ ಸಮಯದಲ್ಲಿ ನನ್ನ ತಮ್ಮ ಚಲಾಯಿಸುತ್ತಿದ್ದ ದ್ವಿ ಚಕ್ರ ವಾಹನದ ಆರ್.ಸಿ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ಅಪಘಾತವಾದ ಸಮಯದಲ್ಲಿ ನನ್ನ ಜೊತೆಯಲ್ಲಿ ನಮ್ಮ ಗ್ರಾಮದವರಾದ ಓದು ಲಿಂಗೇಗೌಡರವರು ಸಹ ಇದ್ದರು. ಸದರಿ ರವರು ನನ್ನ ಮನೆಯ ಪಕ್ಕದ ಮನೆಯವರು. ಅಪಘಾತವಾದ ಬಗ್ಗೆ ಪೊಲೀಸರಿಗೆ ಓದುಲಿಂಗೇಗೌಡರು ದೂರು ನೀಡಿರುತ್ತಾರೆ.

ಅಪಘಾತವಾದ 10 ದಿನಗಳ ನಂತರ ದೂರನ್ನು ನೀಡಿರುತ್ತಾರೆ. ಪೊಲೀಸರು ಅಪಘಾತವಾದ ಬಗ್ಗೆ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಹೇಳಿಕೆಯನ್ನು ಅಪಘಾತವಾದ 11 ದಿನಗಳ ನಂತರ ತೆಗೆದುಕೊಂಡಿರುತ್ತಾರೆ. ಸಾಕ್ಷಿಗೆ ನಿಮ್ಮ ಹೇಳಿಕೆಯನ್ನು ತೆಗೆದುಕೊಳ್ಳುವ ಸಮಯದಲ್ಲಿ ಪೊಲೀಸರು ಇಂತದೇ ವಾಹನ ಅಪಘಾತಪಡಿಸಿರುತ್ತದೆ ಎಂದು ಹೇಳಿರುತ್ತಾರಾ ಎಂದರೆ ಸಾಕ್ಷಿ ನನಗೆ ಈಗ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

ಅಪಘಾತವಾದ ನಂತರ ನನ್ನ ತಮ್ಮನನ್ನು ಚನ್ನಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆ ಸಮಯದಲ್ಲಿ ಓದುಲಿಂಗೇಗೌಡರೇ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆ ದಿನ ಸಹ ಓದು ಲಿಂಗೇಗೌಡರ ಜೊತೆ ಆಸ್ಪತ್ರೆಗೆ ಹೋಗಿರುತ್ತೇನೆ. ನಂತರ ಅಲ್ಲಿಂದ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೂ ಸಹ ಓದುಲಿಂಗೇಗೌಡರ ಜೊತೆ ಹೋಗಿರುತ್ತೇನೆ. ಅಪಘಾತ ಹೇಗೆ ಆಗಿರುತ್ತದೆ ಎಂದು ನಾನು ನಿಮಾನ್ಸ್ ಆಸ್ಪತ್ರೆಯಲ್ಲಿ ಹೇಳಿರುತ್ತೇನೆ.

ದಿನಾಂಕ 08.03.2021 ಸಂಜೆ 5-30 ಕ್ಕೆ ನಾನು ನನ್ನ ತಮ್ಮ ಜೊತೆಯಲ್ಲಿ ದ್ವಿ ಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಸ್ಕಿಡ್ ಆಗಿ ಬಿದ್ದು ಮೃತಪಟ್ಟಿರುತ್ತಾರೆ ಎಂದು ನಿಮಾನ್ಸ್ ಆಸ್ಪತ್ರೆಯಲ್ಲಿ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಚನ್ನಪಟ್ಟಣ ಮತ್ತು ನಿಮಾನ್ಸ್ ಆಸ್ಪತ್ರೆಯ ಎಂ.ಎಲ್.ಸಿ ರಿಜಿಸ್ಟರ್ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಓದುಲಿಂಗೇಗೌಡರು ಈಗಲೂ ನಮ್ಮ ಮನೆಯ ಪಕ್ಕದಲ್ಲಿ ಇರುತ್ತಾರೆ ಮತ್ತು ಅವರು ನನ್ನ ಜೊತೆಯಲ್ಲಿ ಚೆನ್ನಾಗಿ ಇರುತ್ತಾರೆ ಎಂದರೆ ಸರಿ. ಅವರನ್ನು ನ್ಯಾಯಾಲಯಕ್ಕೆ ಕರೆಯಿಸಿ

ಸಾಕ್ಷಿ ನುಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ಅಪಘಾತವಾದ ದಿನ ಮೃತ ನನ್ನ ತಮ್ಮ ದ್ವಿ ಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಸ್ಕಿಡ್ ಆಗಿ ಬಿದ್ದು ಮೃತಪಟ್ಟಿದ್ದರೂ ಸಹ ಚನ್ನಪಟ್ಟಣ ಮತ್ತು ನಿಮಾನ್ಸ್ ಆಸ್ಪತ್ರೆಯ ಎಂ.ಎಲ್.ಸಿ ರಿಜಿಸ್ಟರ್ ಗಳನ್ನು ಉದ್ದೇಶಪೂರ್ವಕವಾಗಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ಸ್ಕಿಡ್ ಆಗಿ ಬಿದ್ದು ಅಪಘಾತಪಡಿಸಿಕೊಂಡಿರುವುದರಿಂದ ಪರಿಹಾರದ ಹಣ ಸಿಗುವುದಿಲ್ಲ ಎಂದು ತಿಳಿದು ಅಪಘಾತವಾದ 2 ದಿನಗಳ ನಂತರ ಪರಿಹಾರ ಹಣ ಪಡೆಯು ಉದ್ದೇಶದಿಂದ ಓದು ಲಿಂಗೇಗೌಡರವರ ಕಡೆಯಿಂದ ಸುಳ್ಳು ದೂರು ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ.  ಅಪಘಾತ ನನ್ನ ತಮ್ಮನ ನಿರ್ಲಕ್ಷ್ಯತನದ ಚಲಾನೆಯಿಂದ ಆಗಿರುತ್ತದೆ ಮತ್ತು ಆ ಸಮಯದಲ್ಲಿ ನನ್ನ ತಮ್ಮ ಹೆಲ್ಮಟ್ ಧರಿಸದೇ ಮತ್ತು ಡಿ.ಎಲ್ ಇಲ್ಲದೆ ಚಲಾಯಿಸುತ್ತಿದ್ದ ಕಾರಣ ಅವರಿಗೆ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

ನಿಪಿ-5 ರ ವರದಿಯ ಪ್ರಕಾರ ಕೆ.ಎ-09-ಡಿ-4384 ವಾಹನ ಅಪಘಾತದಲ್ಲಿ ಭಾಗಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.  ನನ್ನ ಬಳಿ ರೇಷನ್ ಕಾರ್ಡ್ ಇರುತ್ತದೆ.  ಸುಮಾರು 10-12 ವರ್ಷಗಳಿಂದ ರೇಷನ್ ಕಾರ್ಡ್ ಬಳಸುತ್ತಿದ್ದೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಅದರಲ್ಲಿ ನನ್ನ ಮತ್ತು ನನ್ನ ತಮ್ಮನ ಹೆಸರು ಇರುತ್ತದೆ.  ರೇಷನ್ ಕಾರ್ಡ್ ನ್ನು ಹೊರತುಪಡಿಸಿ ಮೃತ ನನ್ನ ತಮ್ಮನವರು ನನ್ನ ಜೊತೆ ವಾಸವಿರುತ್ತಾರೆ ಎಂದು ತೋರಿಸಲು ಬೇರೆ ದಾಖಲೆಗಳು ಇರುತ್ತವೆ ಎಂದರೆ ಸಾಕ್ಷಿಯು ಅವರು ನನ್ನ ಜೊತೆಯಲ್ಲಿ ವಾಸವಿದ್ದರು, ಮುಂದುವರೆದು ರೇಷನ್ ಕಾರ್ಡ್ ನ್ನು ಹೊರತುಪಡಿಸಿ

ಬೇರೆ ದಾಖಲೆ ಇರುವುದಿಲ್ಲ ಎಂದು ನುಡಿಯುತ್ತಾರೆ.

ನಿಪಿ-9 ರ ವಂಶವೃಕ್ಷವನ್ನು ದಿನಾಂಕ 13.04.2022 ರಂದು ನಾನು ಅರ್ಜಿ ಸಲ್ಲಿಸಿ ಪಡೆದುಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿ ಅದನ್ನು ಮೊದಲೇ ಅವರು ಮಾಡಿಸಿದ್ದರು ಎಂದು ನುಡಿಯುತ್ತಾರೆ. ನಿಪಿ-9 ರ ದಾಖಲೆಯ ಪ್ರಕಾರ ಮೃತ ರಾಜೇಶ್ ರವರು ನನ್ನ ಬಳಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. ರೇಷನ್ ಕಾರ್ಡ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರೆ ನಿಜಾಂಶ ತಿಳಿಯುತ್ತದೆ ಎಂದು ಉದ್ದೇಶಪೂರ್ವಕವಾಗಿ ಅದನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ವ್ಯಕ್ತಿ ನನ್ನ ಜೊತೆಯಲ್ಲಿ ವಾಸವಿರಲಿಲ್ಲ ಮತ್ತು ಅವರ ದುಡಿಮೆಯಿಂದ ನಾನು ಅವಲಂಭಿತರಾಗಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ಸಾಕ್ಷಿ ಪ್ರಮಾಣ ಪತ್ರದ ಕಂಡಿಕೆ 3 ರಲ್ಲಿ ಹೇಳಿರುವಂತಹ ಖರ್ಚು ವೆಚ್ಚಗಳನ್ನು ಮಾಡಿರುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ನನ್ನ ತಮ್ಮನವರು ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. ಮೃತ ನನ್ನ ತಮ್ಮನ ವಯಸ್ಸಿನ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಮೃತ ನನ್ನ ತಮ್ಮನಿಗೆ 44 ವರ್ಷ ತಿಳಿಸಿದ್ದು ಆ ಬಗ್ಗೆ ನ್ಯಾಯಾಲಯಕ್ಕೆ ಆಧಾರ್ ಕಾರ್ಡ್ ನ್ನು ಹಾಜರುಪಡಿಸಿಸಲು ತೊಂದರೆ ಇಲ್ಲ. ಮೃತ ನನ್ನ ತಮ್ಮನಿಗೆ 55-60 ವರ್ಷ ವಯಸ್ಸಾಗಿದ್ದು ಹೆಚ್ಚಿನ ಪರಿಹಾರ ಹಣ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಸಾಕ್ಷಿ ಪ್ರಮಾಣ ಪತ್ರದ ಕಂಡಿಕೆ 5 ರಲ್ಲಿ ಹೇಳಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತಾರೆ. ನನಗೆ ಸರ್ಕಾರದಿಂದ ತಿಂಗಳು 800 ಅವಿವಾಹತ ಮಹಿಳೆಯಾಗಿರುವ ವೇತನ ಬರುತ್ತಿದೆ. ಮೃತ ನನ್ನ ತಮ್ಮ ತಿಂಗಳಿಗೆ 25 ಸಾವಿರ ಸಂಬಳ ಬರುತ್ತಿತ್ತು ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ಮೃತ ನನ್ನ ತಮ್ಮ ಸ್ವತಃ ಬಿದ್ದು ಮೃತಪಟ್ಟಿರುವುದರಿಂದ ನಾನು ಯಾವುದೇ ಪರಿಹಾರ ಹಣ ಪಡೆಯುಲು ಅರ್ಹಳಲ್ಲ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಹಣ ಪಡೆಯುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ,

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ ಬಿ.ಟಿ)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು